# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ಸದಸ್ಯರ ಹೆಸರು : ಶ್ರೀ ಡಾ|| ಯಂತೀದ್ರ ಎಸ್**

**(ವಿಧಾನ ಸಭೆಯಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1273 (1298)**

**ಉತ್ತರಿಸಬೇಕಾದ ದಿನಾಂಕ : 19.03.2025**

**ಉತ್ತರಿಸಬೇಕಾಗಿರುವ ಸಚಿವರು : ಮಾನ್ಯ ಕಂದಾಯ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕಂದಾಯ ಇಲಾಖೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 54 ಎಎಸ್‌ಡಿ 76, ದಿನಾಂಕ:28.03.1977 ರಲ್ಲಿ ಲಿಪಿಕ ವೃಂದದ ವೃಂದ ಬಲ ಮಂಜೂರು ಮಾಡಿದ್ದು, ನಂತರ ವೃಂದ ಬಲವನ್ನು ಪರಿಷ್ಕರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ಕಂದಾಯ ಇಲಾಖೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 54 ಎಎಸ್‌ಡಿ 76, ದಿನಾಂಕ:28.03.1977 ರಲ್ಲಿ ಲಿಪಿಕ ವೃಂದದ ಒಟ್ಟು 2216 ಹುದ್ದೆಗಳು ಮಂಜೂರಾಗಿರುತ್ತವೆ.<br><br>ಹೊಸ ಜಿಲ್ಲೆ/ತಾಲ್ಲೂಕುಗಳು ರಚನೆಯಾದಾಗ ಲಿಪಿಕ ಹುದ್ದೆಗಳನ್ನು ಹೆಚ್ಚುವರಿಯಾಗಿ ಸೃಜಿಸಲಾಗಿದ್ದು. ಪ್ರಸ್ತುತ, ಇರುವ ಲಿಪಿಕ ಹುದ್ದೆಗಳ ಒಟ್ಟು ವೃಂದ ಬಲವು 5991 ಆಗಿರುತ್ತದೆ. |
| ಆ) | ಬಂದಿದ್ದಲ್ಲಿ ಈಗಿನ ಜನ ಸಂಖ್ಯೆಗನುಗುಣವಾಗಿ ವೃಂದ ಬಲ ಹೆಚ್ಚಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ; | ಜನಸಂಖ್ಯೆಗನುಗುಣವಾಗಿ ವೃಂದ ಬಲ ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. |
| ಇ) | ಕಂದಾಯ ಇಲಾಖೆಯಲ್ಲಿ ವಿವಿಧ ಹೊಸ ಯೋಜನೆಗಳನ್ನು ಜಾರಿಗೆ ತಂದಿರುವುದರಿಂದ ಈಗಿರುವ ನೌಕರರಿಗೆ ಹೆಚ್ಚಿನ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br>ಕಂದಾಯ ಇಲಾಖೆಯಲ್ಲಿ ನೌಕರರ ಮೇಲಿನ ಒತ್ತಡವನ್ನು ತಗ್ಗಿಸಲು ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಕಾಲಕಾಲಕ್ಕೆ ನೇರ ನೇಮಕಾತಿ, ಅನುಕಂಪದ ಆಧಾರದ ಮೇಲೆ ಹಾಗೂ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುತ್ತಿದೆ. |
| ಈ) | ಬಂದಿದ್ದಲ್ಲಿ, ಒತ್ತಡ ತಗ್ಗಿಸಲು ವೃಂದ ಬಲವನ್ನು ಹೆಚ್ಚಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ? | |

**ಸಂಖ್ಯೆ: ಕಂಇ 46 ಎಂಎಂಎಸ್ 2025.**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**